ಶ್ರೀ ಕೆ. ಆರ್. ರಾಜಗೋಪಾಲ್ —ತಾವು ಹೇಳುವಂತೆ ಅದು ಪೂರ್ತಿಯಾಗಿಲ್ಲ, ಅಲ್ಲಿ ಇನ್ನೂ ಹಳ್ಳಗಳು ಹಾಗೂ ತೊರೆಗಳಿದ್ದು ಆ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಆದ್ದರಿಂದ ಅದನ್ನು ಯಾವಾಗ ಸಂಚಾರಕ್ಕೆ ಯೋಗ್ಯ ರಸ್ತೆಯನ್ನಾಗಿ ಮಾಡಿಕೊಡುತ್ತೀರಿ ?

ಶ್ರೀ ಎಸ್. ಬಂಗಾರಪ್ಪ —ಪೂರ್ತಿ ಮಾಡುವುದು ಎಂದರೆ ಪಕ್ಕಾ ರಸ್ತೆಯಾಗಿ ಮಾಡುವುದು ಎಂದು ಅಲ್ಲ. ತಾವು ಆರೀತಿ ತಿಳಿದುಕೊಳ್ಳಬಾರದು. ಪಕ್ಕಾ ರಸ್ತೆಯಾಗಿ ಮಾಡಬೇಕಾದರೆ ಅದಕ್ಕೆ ನಾನಾ ಹಂತಗಳಿರುತ್ತವೆ. ಈಗ ಅಲ್ಲಿ ಲೋಕಪಾವನಿ ನದಿ ಬರುತ್ತದೆ, ಅಲ್ಲದೆ ಎರಡು ದೊಡ್ಡ ಸೇತುವೆಗಳನ್ನು ಕಟ್ಟಬೇಕಾಗುತ್ತದೆ. ಅದನ್ನು ಮುಂದಿನ ವರ್ಷದಲ್ಲಿ ಹಂತ ಹಂತವಾಗಿ ಕೆಲಸ ತೆಗೆದು ಕೊಳ್ಳುತ್ತೇವೆ.

Medium Irrigation Project in Gulbarga District

266 SRI GOVINDA P. VADEYARAJ (Kamalapur).—Will the Chief Minister be pleased to state :—

(a) the financial allocation to the Medium Irrigation Projects in Gulbarga District during 1978-79 (Projectwise information may be furnished) ;

(*b*) the total amount spent till to day on the Medium Irrigation Projects in Gulbarga District (Project wise figures may be furnished):

(*c*) when the Government proposed to complete these projects ;

(*d*) the area in acreage going to be irrigated on completion of these Medium Irrigation Projects (Projectwise figures may please be furnished);

SRI D. B. CHANDRE GOWDA (Minister for Minor Irrigation) [on be half of SRI D. DEVARAJ URS (Chief Minister).—

(a) The financial allocation for 1978-79 is as under :—

(i)	Soudagar Tank Project	Rs. 64.00	lakhs
(ii)	Amarja Project	Rs. 50-00	,,
(iii)	Lower Mullamari Project	Rs. 50-00	,,
(iv)	Hathikone Project	Nil	
(v)	Chandrampalli Project	Rs. 5-00	,,

(b) Expenditure to end of November 78 is as below :—

(i)	Soudagar Tank Project	Rs. 129.39	,,
(ii)	Amarja Project	Rs. 95.22	,,
(iii)	Lower Mullamari Project	Rs. 86.41	,,
(iv)	Hathikoni Project	Rs. 93.88	,,
(v)	Chandrampalli Project	Rs. 170.07	,,

(c) The probable year of completion of these project to availability of funds is as below :—

(i)	Soudagar Tank Project	1979-80
(ii)	Amarja Project	1981-82
(iii)	Lower Mullamari Project	1981-82
(iv)	Hathikoni Project	Completed Physically
(v)	Chandrampalli Project	Completed except for improvements to canal siphon crossing across waste-weir nala which is being taken up now.

(d) The area going to be irrigated on completion of the project is given below :—

(i)	Saudagar Tank Project	3500 Ac.	(in progress)
(ii)	Amerja Project	22,000 Ac.	(do)
(iii)	Lower Mullamari Project	24,000 Ac,	(do)
(iv)	Hathikoni Project	5,300 Ac.	(Completed.)
(v)	Chandrampalli Project	13,000 Ac.	(do)

SRI GOVINDA P. VADEYARAJ.—Sir, when were these medium irrigation projects started in Gulbarga District what is the progress made in this behalf ?

†ಶ್ರೀ ಡಿ. ಬಿ. ಚಂದ್ರೇಗೌಡ,—ಪೂರ್ಣ ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿದೆ. ಅದಕ್ಕಿಂತ ಹೆಚ್ಚಿಗೆ ಮಾಹಿತಿ ಬೇಕೆಂದು ತಾವು ಕೇಳುವುದಾದರೆ ತರಿಸಿಕೊಡುತ್ತೇನೆ.

SRI GOVIND P. VADEYARAJ.—That is not the answer. ತಾವು ಕೊಟ್ಟಿರುವ ಉತ್ತರದಲ್ಲಿ ಪೂರ್ಣ ವಿವರಗಳಿಲ್ಲ. ನಾನು ತಮ್ಮನ್ನು ಕೇಳುವುದು ಈ ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್‌ನ್ನು ಯಾವಾಗ ಪ್ರಾರಂಭ ಮಾಡಿದ್ದೀರಿ ಎಂದು ?

ಶ್ರೀ ಡಿ. ಬಿ. ಚಂದ್ರೇಗೌಡ.—ಇದರಲ್ಲಿ ೧೯೭೮-೭೯ನೇ ಸಾಲಿನಲ್ಲಿ ಗೊತ್ತುಪಡಿಸಿದ ಮೊಬಲಿಗಿನ ಪೂರ್ಣ ವಿವರ ಇದೆ. ಅಂತಿಮವಾಗಿ ಖರ್ಚುಮಾಡಿದ ಹಣಕ್ಕೆ ಪೂರ್ಣ ವಿವರ ಇದೆ. ಯೋಜನೆ ಪೂರ್ತಿಯಾದನಂತರ ಎಷ್ಟು ಎಕರೆ ನೀರಾವರಿಯಾಗುತ್ತದೆ ಎಂಬುದಕ್ಕೆ ವಿವರ ಇದೆ. ಇದನ್ನು ಯಾವಾಗ ಪ್ರಾರಂಭ ಮಾಡಿದ್ದು ಎಂದು ಬೇಕಾದರೆ ತಮಗೆ ತರಿಸಿಕೊಡುತ್ತೇನೆ.

SRI GOVINDA P. VADEYARAJ.—Sir, is it the way of answering the questions put by hon. Members ? I have asked a very relevant supplementary. Of course in my main question I have asked about the financial allocation for the year 1978-79. Government have furnished the answer for that. In that background I would like to know from the Hon. Minister when were these medium irrigation projects started

in Gulbarga District. The Hon. Minister has no reply for this supplementary. Therefore, I request the Hon. Speaker to come to our rescue and see that proper answers are given by the Government whenever we put supplementary questions.

ಶ್ರೀ ಡಿ. ಬಿ. ಚಂದ್ರೇಗೌಡ.—ಈಗ ತಮಗೆ ಪ್ಲಾನ್ ಪ್ರಾರಂಭ ಮಾಡಿದಾಗಿನಿಂದ ವಿವರ ಬೇಕೆ ? ಅಥವಾ ಕೆಲಸ ಪ್ರಾರಂಭ ಮಾಡಿದಾಗಿನಿಂದ ವಿವರ ಬೇಕೆ? ತಮಗೆ ಏನಂ ಉತ್ತರಬೇಕೆಂದು ಅಪೇಕ್ಷಿಸು ಶ್ರೀರಿ ಅದನ್ನು ಪ್ರತ್ಯೇಕವಾಗಿ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಇದು ಉತ್ತರ ಕೊಡುವ ರೀತಿಯಲ್ಲ. ತಾವು ಉತ್ತರ ಕೊಡುವ ರೀತಿಯನ್ನು ನೋಡಿದರೆ ಇನ್ನು ಮುಂದೆ ಮಂತ್ರಿಗಳು ಸದಸ್ಯರ ಪ್ರಶ್ನೆಗಳಿಗೆ ಯಾವ ರೀತಿ ಉತ್ತರ ಕೋಡಬೇಕೆನ್ನುವ ಬಗ್ಗೆ ಒಂದು ಕೋರ್ಸ್ ಪ್ರಾರಂಭ ಮಾಡಬೇಕಾಗುತ್ತದೆ. ಈಗ ನಾನು ಕೇಳುತ್ತಿರುವುದು ಈ ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್‌ನ್ನು ಯಾವಾಗ ಪ್ರಾರಂಭ ಮಾಡಿದಿರಿ ಎಂದು.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಮಂತ್ರಿಯಾಗಿ ಬಂದಾಗ ಬೇಕಾದರೆ ತರಬೇತಿ ತೆಗೆದುಕೊಳ್ಳಿ. ಈಗ ತಾವು ಏನು ಪ್ರಶ್ನೆಯನ್ನು ಕೇಳಿದ್ದೀರಿ ಅದಕ್ಕೆ ಸೂಕ್ತ ಉತ್ತರವನ್ನು ಕೊಟ್ಟಿದ್ದೇವೆ. ಸಾಮಾನ್ಯವಾಗಿ ಯಾವುದೋ ಒಂದು ಯೋಜನೆ ಪ್ರಾರಂಭವಾಗಬೇಕಾದರೂ ಅದಕ್ಕೆ ಪ್ಲಾನ್ ಆಗಬೇಕು, ಅಂದಾಜು ಆಗಬೇಕು, ಟೆಕ್ನಿಕಲ್ ಅಬ್ಸರ್ವೇಷನ್ಸ್ ಆಗಬೇಕು, ಇನ್ನೂ ಇತ್ಯಾದಿ ಅನೇಕ ಹಂತಗಳಾಗಬೇಕು. ಆದರೆ ತಾವು ಕೇಳಿರುವ ಪ್ರಶ್ನೆಗಳು ಇದ್ಯಾವುದಕ್ಕೂ ಸಂಬಂಧಪಟ್ಟಿಲ್ಲ. ತಾವು ಈಗ ಕೇಳಿರತಕ್ಕ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಕೊಟ್ಟಿದೆ. ಇನ್ನೂ ಹೆಚ್ಚಿಗೆ ಮಾಹಿತಿಬೇಕೆಂದು ಇಷ್ಟಪಡುವುದಾದರೆ, ಅದಕ್ಕೆ ಬೇರೆ ಪ್ರಶ್ನೆಗಳನ್ನು ಕೇಳಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ಗುಲ್ಬರ್ಗ ಜಿಲ್ಲೆಯಲ್ಲಿ ೪-೫ ಪ್ರಾಜೆಕ್ಟ್‌ಗಳು ಇವೆ. ಅವುಗಳಲ್ಲಿ ಯಾವ ಯಾವ ಯೋಜನೆಗಳನ್ನು ಯಾವ ಯಾವ ವರ್ಷದಲ್ಲಿ ಪ್ರಾರಂಭ ಮಾಡಿದಿರಿ ಎಂದು ಪ್ರಶ್ನೆ ಕೇಳಿದ್ದರೆ ಅದಕ್ಕೆ ಸೂಕ್ತ ಉತ್ತರವನ್ನೇ ಕೊಟ್ಟಿಲ್ಲ.

SRI S. R. BOMMAI.—The whole trobule is the Hon. Minister has not come prepared. He has no information available with him. Therefore, he is unable to answer the question.

SRI D. B. CHANDREGOWDA.—I am very much prepared.

ಶ್ರೀ ಕೆ. ಹೆಚ್. ರಂಗನಾಥ್.—ಈ ಮೇಜರ್ ಇರಿಗೇಷನ್, ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳು ಇವತ್ತಿನದಲ್ಲ. ಇವು ೩ನೇ ಪಂಚವಾರ್ಷಿಕ ಯೋಜನೆ ಕಾಲದಿಂದಲೂ ಇವೆ. ನಾನು ಆ ಕಡೆ ಇದ್ದಾಗಿನಿಂದಲೂ ಕೇಳಿದ್ದೇನೆ.

SRI GOVINDA P. VADEYARAJ.—I have to pity. There are only five medium irrigation projects in Gulbarga.....

ಶ್ರೀ ಕೆ. ಹೆಚ್. ರಂಗನಾಥ್.—ನಾನೂ ಮೊದಲೇ ಹೇಳಿದಂತೆ ಈ ಪ್ರಾಜೆಕ್ಟ್‌ಗಳು ೩ನೇ ಪಂಚವಾರ್ಷಿಕ ಯೋಜನೆ ಕಾಲದಿಂದಲೂ ಇವೆ. ಈಗಲೂ ಹಾಗೆಯೇ ಮುಂದುವರಿದುಕೊಂಡು ಬರುತ್ತಿವೆ. Let him not pity.....

SRI GOVIND P. VADEYARAJ.—What is the estimated cost of these five medium irrigation projects ?

2-00 P.M.

ಶ್ರೀ ಡಿ. ಬಿ. ಚಂದ್ರೇಗೌಡ.—ಸ್ವಾಮಿ, ಉತ್ತರದಲ್ಲಿ ಎಲ್ಲ ವಿವರಗಳನ್ನು ಒದಗಿಸಿರುತ್ತೇನೆ. ಪರಿಶೀಲಿಸಿ ನೋಡಬೇಕೆಂದು ಹೇಳುತ್ತೇನೆ. ಸೌದಾಗರ್ ಯೋಜನೆಗೆ ಎಸ್ಟಿಮೇಟೆಡ್ ಕಾಸ್ಟ್ ೧೭೨ ಲಕ್ಷ ರೂಪಾಯಿಗಳು, ಅವಂರ್ಜಾ ಯೋಜನೆಗೆ ಎಸ್ಟಿಮೇಟೆಡ್ ಕಾಸ್ಟ್ ೫೭೦ ಲಕ್ಷ ರೂಪಾಯಿಗಳು,

ಕೆಳಭಾಗದ ಮುಲ್ಲಮಾರಿ ಯೋಜನೆಗೆ ೫೭೦ ಲಕ್ಷ ರೂಪಾಯಿಗಳು, ಹತ್ತಿಕೊಣಿ ಯೋಜನೆಗೆ ಈಗಾಗಲೇ ಪೂರ್ತಿಯಾಗಿರುತ್ತದೆ; ಚಂದ್ರಮ್ಮಪಲ್ಲಿ ಯೋಜನೆಗೆ ಎಸ್ಟಿಮೇಟ್ ಕಾಸ್ಟ್ ೨೦೪.೭೪ ಲಕ್ಷ ರೂಪಾಯಿಗಳನ್ನು ಇಟ್ಟಿರುತ್ತೆ. ಈ ಎಲ್ಲ ಯೋಜನೆಗಳನ್ನು ಅಂದರೆ ಸೌದಾಗರ್ ಯೋಜನೆಯನ್ನು ೧೯೭೯-೮೦ಕ್ಕೂ ಅಮರ್ಜಾ ಯೋಜನೆಯನ್ನು ೧೯೮೧-೮೨ಕ್ಕೂ ಕೆಳಭಾಗದ ಮಲ್ಲಮಾರಿ ಯೋಜನೆಯನ್ನು ೧೯೮೨-೮೩ಕ್ಕೂ ಮುಗಿಸುತ್ತೇವೆಂದು ಹೇಳಿದ್ದೇವೆ. ಸೌದಾಗರ್ ಯೋಜನೆಗೆ ಎಸ್ಟಿಮೇಟೆಡ್ ಕಾಸ್ಟ್ ಇಟ್ಟಿರತಕ್ಕಂಥ ೧೭೨ ಲಕ್ಷ ರೂಪಾಯಿಗಳಲ್ಲಿ ಈಗಾಗಲೇ ೧೨೯ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿರುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಕೆಳಭಾಗದ ಮುಲ್ಲಮಾರಿ ಯೋಜನೆಗೆ ಇಟ್ಟಿರತಕ್ಕಂಥ ೫೭೦ ಲಕ್ಷ ರೂಪಾಯಿಗಳಲ್ಲಿ ೮೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆಂದರೆ ಇದು ಒಂದು ಗಂಭೀರವಾದ ಪರಿಸ್ಥಿತಿಯಾಗಿರುತ್ತದೆ. ಮತ್ತೆ ಇದನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಗಂಭೀರವಾದ ಪರಿಸ್ಥಿತಿ ಎಲ್ಲ ಕಡೆಯೂ ಇರುತ್ತದೆ. ಒಂದೆರಡ ಟ್ಯಾಂಕ್‌ಗಳ ಕೆಲಸ ನಡೆಯುತ್ತಿದ್ದರೆ ಬೇಗನೇ ಮುಗಿಸಿ ಕೊಡಬಹುದಿತ್ತು. ಈಗ ಹಾಗಿಲ್ಲ. We have taken too many projects on hand. We have taken up mane many major irrigation projects and I do not know whether any othey State has taken up so many major and medium irrigation projectsr Unfortunately most of them were taken up only after 1971-72. I am. going to get the dates. This is not a matter for arguments. This is what we have done.

SRI GOVIND P. VADEYARAJ.—Does it mean that he can say any thing he wants ?

SRI D. DEVARAJ URS (Chief Minister).—Whatever information he wants we will give.

MR. SPEAKER.—The hon. Member cannot go on discussing and take as much time as he wants.

SRI D. DEVARAJ URS.—What we are going to allocate for 1978-79 we cannot say now. As and when the allocation is made we will say.

SRI PRABHAKAR TELKAR.—May I know what is the progress and how much amount has been allotted to the Bennithura Irrigation Project which is not at all mentioned in the reply, and will sufficient funds allotted to this medium project ?

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರಶ್ನೆ ಕೇಳಿರತಕ್ಕಂಥಾದ್ದು ಮಧ್ಯಮ ನೀರಾವರಿ ಯೋಜನೆಯ ಬಗ್ಗೆ. ಬೆಣ್ಣೆತೊರೆ ಯೋಜನೆ ಮೇಜರ್ ಇರಿಗೇಷನ್‌ನಲ್ಲಿ ಬರುತ್ತದೆ. ಆದ್ದರಿಂದ ಕೂಡಲೆ ಅದರ ವಿವರಗಳನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಬೆಣ್ಣೆತೊರೆ ಯೋಜನೆ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಅದರ ವಿವರವನ್ನು ಒದಗಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

SRI D. DEVARAJ URS.—All these projects were started in 1973, during drought.

MR. SPEAKER.—Question No. 600 is heldover. Now Question Hour is over.